ಕರ್ನಾಟಕ ಸರ್ಕಾರ

BCWD-12037/35/2017-BCWD_HOSTEL-BCWD

ಆಯುಕ್ತರ ಕಛೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ನಂ.16/ಡಿ, 3ನೇ ಮಹಡಿ, ಡಿ.ದೇವರಾಜ ಅರಸುಭವನ,
ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ ವಸಂತನಗರ,
ಬೆಂಗಳೂರು-52,ದಿನಾಂಕ:31.08.2017

ಗೆ:

ರಾಜ್ಯದ ಎಲ್ಲಾ ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಮಾನ್ಯರೆ,

ವಿಷಯ: ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ನೀಡಬಹುದಾದ ತಿಂಡಿ, ಊಟಗಳ ಮೆನು ಚಾರ್ಟ್ ಸಿದ್ಧಪಡಿಸಿರುವ ಕುರಿತು.

ಉಲ್ಲೇಖ ಸರ್ಕಾರದ ಆದೇಶ ಸಂಖ್ಯೆ ಬಿಸಿಡಬ್ಲ್ಯೂಡಿ 363 ಬಿಎಂಎಸ್ 2017 ದಿ:09.05.2017

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಶ್ರಮಶಾಲೆ, ಮೆಟ್ರಿಕ್ ನಂತರದ ಹಾಗೂ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿನ ನಿಲಯಾರ್ಥಿಗಳಿಗೆ ಮಾಸಿಕ ಭೋಜನ ವೆಚ್ಚದ ದರವನ್ನು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ತಲಾ ರೂ100/- ಹೆಚ್ಚಿಸಿರುವ ಕಾರಣ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಸಭೆ ಹಾಗೂ ತಾಲ್ಲೂಕು ವಿಸ್ತರಣಾಧಿಕಾರಿಗಳ ಸಭೆಯಲ್ಲಿ ಎಲ್ಲಾ ಅಧಿಕಾರಿಗಳೊಂದಿಗೆ ವಿದ್ಯಾರ್ಥಿ ನಿಲಯದ ಆಹಾರದ ಮೆನುಚಾರ್ಟ್ ಪರಿಷ್ಕರಿಸಲು ಚರ್ಚಿಸಿದಂತೆ ಹೊಸ ಮೆನುಚಾರ್ಟ್‌ನ್ನು ಸಿದ್ಧಪಡಿಸಿದ್ದು, ಸದರಿ ಮೆನುಚಾರ್ಟ್‌ನ್ನು ಈ ಪತ್ರದೊಂದಿಗೆ ಲಗತ್ತಿಸಿದೆ. ಇದಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ.

1. ಸದರಿ ಮೆನುಚಾರ್ಟ್‌ನಂತೆ ಪ್ರತಿ ನಿತ್ಯ ಆಹಾರವನ್ನು ಒದಗಿಸಲು ಕ್ರಮ ಕೈಗೊಳ್ಳುವುದು.
2. ಮೆನುಚಾರ್ಟ್‌ನ್ನು ಕಡ್ಡಾಯವಾಗಿ ವಿದ್ಯಾರ್ಥಿ ನಿಲಯಗಳಲ್ಲಿ ಪ್ರದರ್ಶಿಸುವುದು.
3. ನಿಲಯ ಪಾಲಕರು ಹಾಗೂ ವಿದ್ಯಾರ್ಥಿಗಳು ಮೆನು ಚಾರ್ಟ್‌ನ ಮುಂಭಾಗದಲ್ಲಿ ನಿಂತು ಛಾಯಾ ಚಿತ್ರವನ್ನು ತೆಗೆದು ಈ-ಮೇಲ್ ಮುಖಾಂತ ಕಳುಹಿಸುವುದು.

ತಮ್ಮ ವಿಶ್ವಾಸಿ

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

## ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ನೀಡಬಹುದಾದ ತಿಂಡಿ, ಊಟಗಳ ಮೆನು ಚಾರ್ಟ್ ವಿವರ.

BCWD-12037/35/2017-BCWD_HOSTEL-BCWD **ದಿ:31.08.2017**

| | | |
|---|---|---|
| **ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಚಾಮರಾಜನಗರ, ಮೈಸೂರು, ಮಂಡ್ಯ, ಹಾಸನ, (ಸಕಲೇಶಪುರ ಹೊರತುಪಡಿಸಿ) ತುಮಕೂರು, ಚಿಕ್ಕಮಗಳೂರು (ಕಡೂರು & ತರಿಕೆರೆ ಮಾತ್ರ) ಶಿವಮೊಗ್ಗ (ಶಿಕಾರಿಪುರ, ಶಿವಮೊಗ್ಗ, ಭದ್ರಾವತಿ ತಾಲ್ಲೂಕು ಮಾತ್ರ) ದಾವಣಗೆರೆ, ಚಿತ್ರದುರ್ಗ** | | |
| 1. | ಬೆಳಿಗ್ಗೆ ತಿಂಡಿಗೆ | 1) ಇಡ್ಲಿ ಸಾಂಬಾರು/ಚಿತ್ರಾನ್ನ/ದೋಸೆ/ಟೊಮಾಟೋ ಬಾತ್/ಪೂರಿ ಮತ್ತು ಸಾಗು /ಪಲಾವ್/ಚಪಾತಿ ಮತ್ತು ಪಲ್ಯ /ಪುಳಿಯೊಗರೆ (ಪ್ರತಿ ದಿನ ಒಂದರಂತೆ) ಕಾಫೀ/ಟೀ.<br>2) ಮಾಹೆಯ 8 ಮತ್ತು 23ನೇ ತಾರೀಖಿನ ಬೆಳಗ್ಗಿನ ತಿಂಡಿಗೆ ಬ್ರೆಡ್ ಆಮ್ಲೇಟ್ ನೀಡುವುದು. |
| 2. | ಮಧ್ಯಾಹ್ನ ಊಟಕ್ಕೆ | ಮುದ್ದೆ, ಅನ್ನ ಮತ್ತು ಪ್ರತಿ ದಿನಕ್ಕೆ ಒಂದು ಬಗೆಯ ಬಸ್ಸಾರು/ಪಲ್ಯ ಸೊಪ್ಪು ಸಾರು/ಮಿಶ್ರ ತರಕಾರಿ ಸಾಂಬಾರು, ಮಜ್ಜಿಗೆ ಉಪ್ಪಿನಕಾಯಿ. |
| 3. | ರಾತ್ರಿ ಊಟ | 1. ಮುದ್ದೆ, ಅನ್ನ ಮತ್ತು ಪ್ರತಿ ದಿನಕ್ಕೆ ಒಂದು ಬಗೆಯ ಬೇಳೆ/ಕಾಳು/ಮೊಳಕೆ ಕಾಳು/ತರಕಾರಿ ಸೊಪ್ಪು ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ, ಉಪ್ಪಿನಕಾಯಿ.<br>2. ವಾರಕ್ಕೆ ಮೂರು ಸಲ ಒಂದೊಂದು ಬಾಳೆಹಣ್ಣು, ವಾರಕ್ಕೆ ಮೂರು ಸಲ ಮೊಟ್ಟೆ ನೀಡುವುದು.<br>3. ತಿಂಗಳ ಶುಕ್ರವಾರದಂದು ಒಂದೊಂದು ಬಗೆಯ ಸಿಹಿ ಊಟ(ಜಾಮೂನು, ಗೋಧಿ ಪಾಯಸ, ಹುಗ್ಗಿ ಇತ್ಯಾದಿ)<br>4. ಮಾಹೆಯ 1 ಮತ್ತು 15ನೇ ತಾರೀಖಿನ ರಾತ್ರಿ ಊಟಕ್ಕೆ ಚಿಕನ್ ನೀಡುವುದು. |
| 4. | ಸಾಯಂಕಾಲದ ಲಘು ಉಪಹಾರ (5.00 ರಿಂದ 5.30 ಗಂಟೆಯೊಳಗೆ) | 1)ಅವಲಕ್ಕಿ 2) ಖಾರಾಪುರಿ 3)ದೋಸೆ 4) ಬಜ್ಜಿ 5) ಮಂಡಕ್ಕಿ ಒಗ್ಗರಣೆ 6) ಖಾರಾ ಬಾತ್ ಉಪ್ಪಿಟ್ಟು (ವಾರದಲ್ಲಿ ಒಂದೊಂದು ಬಗೆಯ ತಿಂಡಿ), ಬೂಸ್ಟ್, ಅಥವಾ ಹಾಲಿಕ್ಸ್, (ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ) ಕಾಫಿ/ಟೀ ಮತ್ತು ಬಿಸ್ಕಟ್/ರಸ್ಕ್ (ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ). |
| **ಕೊಡಗು, ಚಿಕ್ಕಮಗಳೂರು (ಕಡೂರು ಮತ್ತು ತರಿಕೆರೆ ಹೊರತು ಪಡಿಸಿ) ಹಾಸನ, (ಸಕಲೇಶಪುರ ಮಾತ್ರ) ದಕ್ಷಿಣ ಕನ್ನಡ, ಉಡುಪಿ,ಉತ್ತರ ಕನ್ನಡ ಶಿವಮೊಗ್ಗ (ತೀರ್ಥಹಳ್ಳಿ, ಸೊರಬ, ಸಾಗರ, ಹೊಸನಗರ ಮಾತ್ರ) ಬೆಳಗಾವಿ (ಖಾನಾಪುರ ಮಾತ್ರ)** | | |
| 1. | ಬೆಳಿಗ್ಗೆ ತಿಂಡಿಗೆ | 1) ವಾರಕ್ಕೆ 2 ದಿನ ಗಂಜಿ, ಚಟ್ನಿ/ಪಲ್ಯ ಮತ್ತು ಚಹಾ<br>2) ವಾರಕ್ಕೆ 1 ದಿನ ಇಡ್ಲಿ, ಸಾಂಬಾರು/ ಚಟ್ನಿ ಮತ್ತು ಚಹಾ<br>3) ವಾರಕ್ಕೆ 1 ದಿನ ದೋಸೆ ಚಟ್ನಿ/ಪಲ್ಯ ಮತ್ತು ಚಹಾ |

| | | |
|---|---|---|
| | | 4) ವಾರಕ್ಕೆ 1 ದಿನ ಅವಲಕ್ಕಿ ಮತ್ತು ಚಹಾ<br>5) ವಾರಕ್ಕೆ 1 ದಿನ ಪೂರಿ ಹಾಗೂ ಸಾಗು ಮತ್ತು ಚಹಾ<br>6) ವಾರಕ್ಕೆ 1 ದಿನ ಚಿತ್ರಾನ್ನ ಮತ್ತು ಚಹಾ<br>7) ಮಾಹೆಯ 8 ಮತ್ತು 23ನೇ ತಾರೀಖಿನ ಬೆಳಗ್ಗಿನ ತಿಂಡಿಗೆ ಬ್ರೆಡ್ ಅಮ್ಲೇಟ್ ನೀಡುವುದು. |
| 2. | ಮಧ್ಯಾಹ್ನ ಊಟಕ್ಕೆ | 1) ವಾರಕ್ಕೆ 2 ದಿನ ಅನ್ನ ಮೊಳಕೆಕಾಳು, ತರಕಾರಿ ಮಿಶ್ರಿತ ಸಾರು ಮತ್ತು ಮಜ್ಜಿಗೆ<br>2) ವಾರಕ್ಕೆ 2 ದಿನ ತೊಗರಿಬೇಳೆ, ತರಕಾರಿ ಮಿಶ್ರಿತ ಸಾರು ಮತ್ತು ಮಜ್ಜಿಗೆ<br>3) ವಾರಕ್ಕೆ 3 ದಿನ ಅನ್ನ ಬೇಳೆ/ಕಾಳು, ಮಿಶ್ರಿತ ಸೊಪ್ಪಿನ ಸಾರು ಮತ್ತು ಮಜ್ಜಿಗೆ<br>4) ಪ್ರತಿ ಶನಿವಾರ ಅನ್ನ, ಸಾಂಬಾರು ಜೊತೆಗೆ ಸಿಹಿ ಊಟ ಮತ್ತು ಮಜ್ಜಿಗೆ. |
| 3. | ರಾತ್ರಿ ಊಟ | 1) ವಾರಕ್ಕೆ 3 ದಿನ ಅನ್ನ ಮತ್ತು ಬೇಳೆ/ಕಾಳು/ ಮಿಶ್ರಿತ ಸೊಪ್ಪಿನ ಸಾಂಬಾರು, ಮಜ್ಜಿಗೆ<br>2) ವಾರಕ್ಕೆ 3 ದಿನ ಅನ್ನ ಮತ್ತು ತರಕಾರಿ ಮಿಶ್ರಿತ ಸಾಂಬಾರು, ಬಾಳೆಹಣ್ಣು<br>3) ಪ್ರತಿ ವಾರಕ್ಕೆ 3 ಬಾರಿ ಮೀನು ಅಥವಾ ಮೊಟ್ಟೆ.<br>4) ಮಾಹೆಯ 1 ಮತ್ತು 15 ನೇ ತಾರೀಖಿನ ರಾತ್ರಿ ಊಟಕ್ಕೆ ಚಿಕನ್ ನೀಡುವುದು. |
| 4. | ಸಾಯಂಕಾಲದ ಲಘು ಉಪಹಾರ (5.00 ರಿಂದ 5.30 ಗಂಟೆಯೊಳಗೆ) | 1)ಅವಲಕ್ಕಿ, 2) ಖಾರಾಪುರಿ 3) ದೋಸೆ 4) ಬಜ್ಜಿ 5) ಮಂಡಕ್ಕಿ ಒಗ್ಗರಣೆ, 6) ಖಾರಾಬಾತ್ ಉಪ್ಪಿಟ್ಟು, (ವಾರದಲ್ಲಿ ಒಂದೊಂದು ಬಗೆಯ ತಿಂಡಿ) ಬೂಸ್ಟ್ ಅಥವಾ ಹಾರ್ಲಿಕ್ಸ್ (ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ), ಕಾಫಿ/ಟೀ ಮತ್ತು ಬಿಸ್ಕೆಟ್/ರಸ್ಕ್ (ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ) |
| **ಹಾವೇರಿ, ಧಾರವಾಡ, ಬೆಳಗಾವಿ (ಖಾನಾಪುರ ಹೊರತುಪಡಿಸಿ), ಬಾಗಲಕೋಟೆ, ಬಿಜಾಪುರ, ರಾಯಚೂರು, ಯಾದಗಿರಿ, ಕಲಬುರಗಿ, ಬೀದರ್, ಬಳ್ಳಾರಿ, ಕೊಪ್ಪಳ, ಗದಗ** | | |
| 1. | ಬೆಳಿಗ್ಗೆ ತಿಂಡಿಗೆ | 1. ದೋಸೆ, ಟೋಮೋಟೋ ಬಾತ್, ಮಂಡಕ್ಕಿ ಉಸುಳಿ, ಪೂರಿ ಮತ್ತು ಸಾಗು, ಪಲಾವ್ ಚಪಾತಿ ಪಲ್ಯ (ಪ್ರತಿ ದಿನ ಒಂದರಂತೆ) ಮತ್ತು ಹಾಲು/ಕಾಫೀ/ಟೀ.<br>2. ಮಾಹೆಯ 8 ಮತ್ತು 23ನೇ ತಾರೀಖಿನ ಬೆಳಗ್ಗಿನ ತಿಂಡಿಗೆ ಬ್ರೆಡ್ ಅಮ್ಲೇಟ್ ನೀಡುವುದು. |
| 2. | ಮಧ್ಯಾಹ್ನ ಊಟಕ್ಕೆ | ಚಪಾತಿ/ರೊಟ್ಟಿ, ಸಾಗು/ಚಟ್ನಿ, ಅನ್ನ ಮತ್ತು ಪ್ರತಿ ದಿನಕ್ಕೆ ಒಂದು ಬಗೆಯ ಬೇಳೆ/ಕಾಳು/ಮೊಳಕೆ ಕಾಳು/ತರಕಾರಿ ಸೊಪ್ಪು ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ ಮತ್ತು ಉಪ್ಪಿನಕಾಯಿ. |
| 3. | ರಾತ್ರಿ ಊಟ | 1) ಚಪಾತಿ/ರೊಟ್ಟಿ, ಸಾಗು/ಚಟ್ನಿ, ಅನ್ನ ಮತ್ತು ಪ್ರತಿ ದಿನಕ್ಕೆ ಒಂದು ಬಗೆಯ ಬೇಳೆ/ಕಾಳು/ಮೊಳಕೆ ಕಾಳು/ತರಕಾರಿ ಸೊಪ್ಪು ಮಿಶ್ರಿತ ಸಾಂಬಾರು ಮತ್ತು ಮಜ್ಜಿಗೆ, ಉಪ್ಪಿನಕಾಯಿ. |

| | | |
|---|---|---|
| | | 2) ವಾರಕ್ಕೆ ಊರು ಸಲ ಒಂದೊಂದು ಬಾಳೆ ಹಣ್ಣು, ವಾರಕ್ಕೆ ಮೂರು ಸಲ ಮೊಟ್ಟೆ ನೀಡುವುದು.<br>3) ಪ್ರತಿ ತಿಂಗಳ ಶುಕ್ರವಾರದಂದು ಒಂದೊಂದು ಬಗೆಯ ಸಿಹಿ ಊಟ. (ಜಮೂನ್,ಗೋಧಿ ಪಾಯಸ, ಹುಗ್ಗಿ ಇತ್ಯಾದಿ)<br>4) ಮಾಹೆ 1 ಮತ್ತು 15 ನೇ ತಾರೀಖಿನ ರಾತ್ರಿ ಊಟಕ್ಕೆ ಚಿಕನ್ ನೀಡುವುದು. |
| 4. | ಸಾಯಂಕಾಲದ ಲಘು ಉಪಹಾರ (5.00 ರಿಂದ 5.30 ಗಂಟೆಯೊಳಗೆ) | 1)ಅವಲಕ್ಕಿ 2) ಖಾರಾಪುರಿ 3)ದೋಸೆ 4) ಬಜ್ಜಿ 5) ಮಂಡಕ್ಕಿ ಒಗ್ಗರಣೆ 6) ಖಾರಾ ಬಾತ್ ಉಪ್ಪಿಟ್ಟು (ವಾರದಲ್ಲಿ ಒಂದೊಂದು ಬಗೆಯ ತಿಂಡಿ) ಬೂಸ್ಟ್ ಅಥವಾ ಹಾರ್ಲಿಕ್ಸ್ (ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿಗೆ), ಕಾಫಿ/ಟೀ ಮತ್ತು ಬಿಸ್ಕಟ್/ರಸ್ಕ್ (ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ). |

ಮೇಲ್ಕಾಣಿಸಿದ ಮೆನು ಚಾರ್ಟ್‌ನ್ನು ಪ್ರತಿ ವಿದ್ಯಾರ್ಥಿ ನಿಲಯದಲ್ಲಿ ಪ್ರದರ್ಶಿಸಿ, ಮೆನು ಚಾರ್ಟ್‌ನ ಅನುಸಾರ ವಿದ್ಯಾರ್ಥಿ ನಿಲಯಗಳಲ್ಲಿ ಅಹಾರವನ್ನು ನೀಡಲು ಸೂಚಿಸಿದೆ.

ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.